ಒಂದೆರಡು ಪತ್ರಿಕೆಗಳು ಹಿಂದೆ ಒಂದು ಸಾರಿ ಪ್ರಕಟವಾಗಿದ್ದವು. ಒಂದು ಸಂಗತಿ ಏನೆಂದರೆ ಯೂನಿವರ್ಸಿಟಿ ವ್ಯವಹಾರದಲ್ಲಿ ಸರ್ಕಾರ ಪ್ರವೇಶ ಮಾಡುವುದಿಲ್ಲವೆಂದರೆ ಈ ಸಂದರ್ಭದಲ್ಲಿ ಅನ್ಯಾಯವಾಗಿ ಹುಡುಗರಿಗೆ ಎಷ್ಟು ತೊಂದರೆಯಾಗಿದೆ ಎನ್ನುವುದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಪರೀಕ್ಷೆಗಳನ್ನು ನಡೆಸಬೇಕಾದರೆ ಎಷ್ಟು ಲಕ್ಷರೂಪಾಯಿ ಖರ್ಚಾಗುತ್ತದೆ, ವಿದ್ಯಾರ್ಥಿಗಳಿಗೆ ಎಷ್ಟು ಕಾತರತೆ ಇರುತ್ತದೆ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಈರೀತಿ ಆಗಲೂ ಏನು ಕಾರಣ, ಯಾರು ಕಾರಣ ಎಂಬುದನ್ನು ಕಂಡುಹಿಡಿದು ಯಾರು ಇದಕ್ಕೆ ಹೊಣೆಗಾರರೋ ಅವರನ್ನು ಉಗ್ರ ಶಿಕ್ಷೆಗೆ ಗುರಿ ಮಾಡದೆ ಹೋದರೆ ಇದು ಇನ್ನು ಮುಂದೆಯೂ ಅವಾಹತವಾಗಿ ನಡೆಯುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಇನ್ನೊಂದು ವಿಷಯವೇನೆಂದರೆ. ಟ್ಯಾಬ್ಯುಲೇಷನ್‌ನಲ್ಲಿ ಕೂಡ ಇದೇರೀತಿ ಅವ್ಯವಸ್ಥೆಗಳು ನಡೆದು ಕೆಲವರು ಸಿಕ್ಕಿಹಾಕಿಕೊಂಡಿದ್ದಾರೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಗೊತ್ತಾಗಿಲ್ಲ. ನಿಜವಾಗಿ ಮಾರ್ಕ್ಸ್ ಕಾರ್ಡಿನಲ್ಲಿ 25ಕ್ಕೆ 4ನ್ನು ಮಾಡಿ 40 ಇದ್ದದ್ದನ್ನು 58ನ್ನು ಮಾಡುವುದು ಈ ರೀತಿ ಬಹಳ ಅನ್ಯಾಯಗಳು ನಡೆದಿವೆ. ಆದರೂ ಆದರಲ್ಲಿ ತಪ್ಪಿತಸ್ಥರು ಇನ್ನೂ ಲೆಕ್ಚರರ್‌ಗಳಾಗಿ ಮುಂದುವರಿಯುತ್ತಿದ್ದಾರೆ. ತಾವು ಇದನ್ನು ಯೋಚನೆ ಮಾಡಬೇಕಾಗುತ್ತದೆ. ಇದಕ್ಕೆ ಯಾರು ಕಾರಣರೆಂದು ಕಂಡುಹಿಡಿದು ಇದು ಮತ್ತೆ ಪುನರಾವೃತ್ತಿ ಆಗದಂತೆ ನೋಡಿಕೊಳ್ಳಬೇಕು ಇದು ಬೋರ್ಡಿನಲ್ಲಿ ನಡೆದಿದೆಯೇ ಪ್ರಿಂಟಿಂಗ್‌ನಲ್ಲಿ ನಡೆದಿದೆಯೇ ಅಥವಾ ಡಿಸ್ಟ್ರಿಬ್ಯೂಷನ್ ಲೆವೆಲ್‌ನಲ್ಲಿ ನಡೆದಿದೆಯೇ ಎಂಬುದನ್ನು ಪತ್ತೆ ಮಾಡಿ ಈ ಲೋಪಗಳನ್ನು ಸರಿಪಡಿಸದೆ ಹೋದರೆ ಪರೀಕ್ಷೆಯ ಪಾವಿತ್ರ್ಯತೆ ಇರುವುದಿಲ್ಲ ಇದನ್ನು ಲಘುವಾಗಿ ತೆಗೆದುಕೊಳ್ಳದೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಯಾರೇ ತಪ್ಪಿತಸ್ಥರಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಕೆಲವು ಅಧಿಕಾರಿಗಳು ಸಾವಿರಾರು ರೂಪಾಯಿ ಟ್ರಾವೆಲಿಂಗ್ ಚಾರ್ಜ್‌ಗಳನ್ನು ತೆಗೆದುಕೊಂಡಿದ್ದಾರೆ, ತೆಗೆದುಕೊಳ್ಳುತ್ತಿದ್ದಾರೆ. ಆದರಿಂದ ಯಾರೇ ತಪ್ಪಿತಸ್ಥರು ಇದ್ದರೂ, ಅದರಲ್ಲಿ ತಮ್ಮದು ಏನಾದರೂ ತಪ್ಪು ಇದ್ದರೂ ಸಹ ಅದಕ್ಕೆ ಶಿಕ್ಷೆಗೆ ಒಳಗಾಗಬೇಕು ಎಂದು ಹೇಳಿ ಮತ್ತೆ ಯಾವರೀತಿಯಿಂದಲೂ ಇದು ಪುನರಾವರ್ತನೆಯಾಗದಂತೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Statement by the Minister for University Education

re. Leakage of PUC. Question papers and re-examinations

5-00 P.M.

SRI S. M. YAHYA (Minister for University Education and Wakfs).- I would like to make the following statement:

"There has been a leakage of question papers of both first and second year Pre-University Education Examination. The Leakage was noticed when an anonymous letter enclosing a question paper was received by Post before the examination was due to be held. This was confirmed when a second question paper was similarly received. The Corps of Detectives has been ordered to investigate the matter and submit a report to Government as to how and to what extent the leakage took place. Its report is awaited.

The P.U.C. re-examination will start on 22nd April and end on 20th May 1977. From 22nd April to 28th April the time-table of examination remains the same. From 29th onwards there will be changes to cover the entire scheme of examinations within the short possible time."

ಮಾನ್ಯ ಶಾಮಣ್ಣನವರು ಎಕ್ಸಾಮಿನೇಷನ್ ಅನ್ನು ಮುಂದೆ ಹಾಕುವುದರಿಂದ ಯಾವರೀತಿಯಲ್ಲಿ ಹುಡುಗರಿಗೆ ಮತ್ತು ತಂದೆತಾಯಿಗಳಿಗೆ ತೊಂದರೆಯಾಗಿದೆ ಎನ್ನುವುದನ್ನು ಹೇಳಿದರು. ಅದು ಬಹಳಷ್ಟು ನಿಜ ಏಕೆಂದರೆ ಕೊಶ್ಚನ್ ಪೇಪರ್ ಸಿಕ್ಕಿದವರಿಗೆ ಹೆಚ್ಚು ಮಾರ್ಕ್ಸ್, ಮತ್ತು ಯಾರು ಹೆಚ್ಚು ಓದಿ ಪೇಪರ್ ಸಿಕ್ಕಿರಲಿಲ್ಲವೋ ಅವರಿಗೆ ಹೆಚ್ಚು ಮಾರ್ಕ್ಸ್ ಇಲ್ಲದಂತೆ ಆಗುತ್ತದೆ. ಆದ್ದರಿಂದ ನಾವು ರೀ ಎಕ್ಸಾಮಿನೇಷನ್ ಮಾಡುತ್ತಿದ್ದೇವೆ. ಇದು ಮಹತ್ತರವಾದ ಕೆಲಸ. There are more than 65 subjects, and the results will have to be announced well in advance so that there will be time for the students to join Institutions for further studies.

ನರ್ಕಾರದವರು ಈ ದಿಸೆಯಲ್ಲಿ ಒಳ್ಳೆಯ ತೀರ್ಮಾನ ತೆಗೆದುಕೊಂಡಿದ್ದೇವೆ. ಪೇಪರ್‌ಗಳು ಲೀಕೇಜ್ ಆಗಬಾರದು. ಇದರಿಂದ ಎಕ್ಸಾಮಿನೇಷನ್ ಪವಿತ್ರತೆ ಹೊಗತ್ತದೆ ಎಂದು ತಿಳಿದು ಕೊಂಡು ಈ ಕಾರ್ಯವನ್ನು ಮಾಡಿದ್ದೇವೆ. ಏಕೆಂದರೆ ಇದಕ್ಕೆ ಪವಿತ್ರತೆ ಇಲ್ಲದೇ ಹೋದರೆ ಪರಿಸ್ಥಿತಿಯು ಎಂದಾಗುತ್ತದೆ ಇದರಲ್ಲಿ ಯಾವ ಲೋಪದೋಷಗಳು ಏನಾದರೂ ಇದ್ದರೆ ಅದನ್ನೂ ತಿದ್ದುಪಡಿ ಮಾಡಿ ನೋಡಲಿಕ್ಕೆ ಪ್ರಯತ್ನ ಮಾಡುತ್ತೇವೆ. The examinations will become farce if they are not conducted in the manner as specified under the rules. Leakage may take place at the point of setting the Question paper. Leakage may take place at the point of moderation. Thirdly the leakage may take place while translating the question papers. Fourthly, it may take place while it is being printed. Fifthly, the question papers will go to different Institutions. There are more than 300 centres in Karnataka. The papers are sent to them in advance. The principals and other Lecturers would be the custodians of the papers. Leakage may take place in any source when more than hundreds and thousands of people are connected with this system. Our anxiety is to take all precautions to put an end to leakage in any manner. But whatever methods we have adopted, there are people involved. Whatever methods and whatever modifications we make, there will be still possibility for leakage. But we try to avoid as much as possible. We do not like to get the question papers printed well in advance. Immediately after they are printed they will be sent to the Treasuries to be kept in safe custody. The Deputy Commissioners at the District level and the Tahasildars at the Taluka level will be the custodians. The papers will be given to the Centres only one hour in advance. We will be giving some code number to the paper packet These are some of the changes we have made. They may require further new methods so as to take as many precautions as possible so that the students should not suffer and there may not be agony to the parents also. Many students and the parents too have fast very much because they have studied very much and the parents also have put their efforts to make the students study. This made them very unhappy because the examination is postponed and the students have suffered a lot. We have to balance because a few people who got the paper will get more marks than those who did not get them. Those who get more marks by unscrupulous methods may get seats in the professional Colleges. The students

who are really intelligent will have to suffer. I must appreciate the anxiety of the Hon'ble. Members here. Both the students and the parents were anxious to get the papers and some of them got them through some sources. Unless there is complete honestly, there cannot be fool proof in this matter. The Government will take steps to see that there should be a fair examination and we will certainly do it.

ಶ್ರೀ ಎಚ್. ಡಿ. ದೇವೇಗೌಡ.—(ಹೊಳೇನರಸೀಪುರ) ಸನ್ಮಾನ್ಯ ಸಭಾಧ್ಯಕ್ಷಣೀಯವರೇ, ಮಾನ್ಯ ಮಂತ್ರಿಗಳು ನೀಡಿದಂಥ ಹೇಳಿಕೆಯನ್ನು ನಾನು ಕೇಳಿಕೊಂಡೆ. ಅವರು ಬಹಳ ವ್ಯಾಪಕವಾದ ರೀತಿಯಲ್ಲಿ ಇದರಲ್ಲಿ ದೋಷ ಇದೆ. ಈ ದೋಷ ಯಾವುದೇ ಒಂದು ಕಡೆ ಕೇಂದ್ರೀಕೃತವಾಗಿಲ್ಲ ಎಂದು ಹೇಳಿದ್ದಾರೆ. ಮತ್ತು ಇದನ್ನು ಪತ್ತೆ ಹಚ್ಚುವುದು ತುಂಬಾ ಕಷ್ಟವಾಗಿದೆ ಎನ್ನುವುದನ್ನು ಹೇಳಿ, ಇದನ್ನು ವಿಚಾರಣೆ ಮಾಡಲಿಕ್ಕೆ ಸಿಐಡಿಗೆ ಹೇಳಿದ್ದೇವೆಂದು ತಿಳಿಸಿದ್ದಾರೆ. ನಾನು ಆಪಾದನೆ ಮಾಡಬೇಕು ಎಂದು ಯಾವ ಮಾತನ್ನೂ ಹೇಳುವುದಿಲ್ಲ. ಈ ಮಂಡಳಿಯ ಸದಸ್ಯರು ಯಾರಿದ್ದಾರೆ ಅವರ ಮಗ ಪಿ.ಯು.ಸಿ. ಪರೀಕ್ಷೆಗೆ ಕೂತಿದ್ದಾನೆ. ಇದನ್ನು ನನಗೆ ಪ್ರಮುಖವಾಗಿಂಥ ಜನ ಬಂದು ಈ ಒಂದು ದೋಷಕ್ಕೆ ಅವರೇ ಕಾರಣ ಎಂದು ಹೇಳಿದ್ದಾರೆ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಈ ಒಂದು ದೋಷಕ್ಕೆ ಬೋರ್ಡಿನ ಸದಸ್ಯರು ಕಾರಣಕರ್ತರಾಗಿದ್ದರೆ ಅವರೆಲ್ಲರೂ ರಾಜೀನಾಮೆ ಕೊಡಬೇಕಾಗುತ್ತದೆ, ಮತ್ತು ಅವರನ್ನು ಮನೆಗೆ ಕಳುಹಿಸಬೇಕಾಗುತ್ತದೆ. ಅವರು ಅಲ್ಲಿ ಕೆಲಸ ಮಾಡಲಿಕ್ಕೆ ಅನರ್ಹರು ಈ ವಿಷಯದಲ್ಲಿ ನಮ್ಮ ಸಿ.ಐ.ಡಿ. ಅಧಿಕಾರಿಗಳು ಎಷ್ಟು ದೂರ ಹೋಗಿದ್ದಾರೆ ಎಂದರೆ, ಯಾರು ಯಾರನ್ನೋ ಹಿಡಿದುಕೊಂಡು ಹೋಗಿ ತಮ್ಮ ಹದ್ದುಬಸ್ತಿನಲ್ಲಿ ಪೊರಿ ವರ್ತನೆ ಮಾಡಿದ್ದಾರೆ. ಅಧಿಕಾರಿ ಶಾಹಿಯ ಪ್ರವೃತ್ತಿಯನ್ನು ಕಳೆದ 20 ತಿಂಗಳಲ್ಲಿ ಕಲಿತುಬಿಟ್ಟಿದ್ದಾರೆ. ಇದನ್ನು ಸ್ವಲ್ಪ ತಪ್ಪಿಸಬೇಕು. ಏತಕ್ಕೆಂದರೆ 4ನೇ ತಾರೀಖು ರಾತ್ರಿ ಬಸವನಗುಡಿಯಲ್ಲಿರುವ ಕಾಲೇಜು ಹಾಸ್ಟಲ್‌ಗೆ ಪೋಲೀಸ್ ಅಧಿಕಾರಿಗಳು ಹೋಗಿ ಪಿ.ಯು.ಸಿ. 2ನೇ ತರಗತಿಯಲ್ಲಿ ಓದುತ್ತಿರುವ ನುಬ್ರಾಯಪ್ಪ, ಸದಾಶಿವರೆಡ್ಡಿ ಮತ್ತು ಬೈಯ್ಯಾರೆಡ್ಡಿ ಇವರುಗಳನ್ನು ಕರೆದುಕೊಂಡು ಹೋಗಿ ಸಿಕ್ಯಾಪಟ್ಟೆ ಹೊಡೆದಿದ್ದಾರೆ. ನಂತರ ಅವರು ಏನು ಹೇಳಿದ್ದಾರೆ ಎಂದರೆ ಈ ರೀತಿ ನೀವು ಒಂದು ಸ್ಟೇಟ್ ಮಾಡಬೇಕು ಎಂದು ಅಂದರೆ ಕಾಲೇಜು ಪ್ರಿನ್ಸಿಪಾಲ್ ರಾಮಕೃಷ್ಣ ಮತ್ತು ನಾಗರಾಜು ಅವರು ಇದನ್ನು ಕೊಟ್ಟರು ಅನ್ನುವ ಒಂದು ಸ್ಟೇಟ್‌ಮೆಂಟ್ ನೀವು ಮಾಡಬೇಕು ಅಂತ ತಿಳಿಸಿದ್ದಾರೆ. ಆಮೇಲೆ ಇನ್ನೂ ಅವರನ್ನು ಇಟ್ಟುಕೊಂಡರೆ ಬಹಳ ಗಲಾಟೆ ಆಗುತ್ತದೆ ಅಂತ ತಿಳಿದುಕೊಂಡು ಆ ಹುಡುಗರನ್ನು ಪಾಪವನ್ನು ಕಳುಹಿಸಿಬಿಟ್ಟರು. ಯಾರೋ ಮಾಡಿದ ದೋಷವನ್ನು ಯಾರ ಮೇಲೋ ಹೊರಿಸಿ ನುಣಚಿಕೊಳ್ಳುವಂಥಾ ಒಂದು ಸ್ಪವೃತ್ತಿಯನ್ನು ಬೆಳಸಿಕೊಳ್ಳುವಂಥಾದ್ದರ ಬಗ್ಗೆ ತಾವು ಮುನ್ನೆಚ್ಚರಿಕೆವಹಿಸಬೇಕು ಎಂದು ಹೇಳುತ್ತೇನೆ. ಪೋಲೀಸ್ ಅಧಿಕಾರಿಗಳಾದ ಚಿಕ್ಕಬಸವಯ್ಯ ಮತ್ತು ಗುಜ್ಜಾರಯ್ಯ ಅವರು ನಿರಪರಾಧಿಗಳಾದ ಹುಡುಗರನ್ನು ಹಿಡಿದು ಹೊಡೆದು ನಂತರ ಅವರನ್ನು ಅಲ್ಲೇ ಇಟ್ಟುಕೊಂಡರೆ ಈ ಗಲಭೆ ಇನ್ನೂ ವಿಕೋಪಕ್ಕೆ ಹೋಗುತ್ತದೆ ಎಂದು ತಿಳಿದು ಅವರನ್ನು ಪಾಪಸ್ಸು ಕಳುಹಿಸಿಬಿಟ್ಟಿದ್ದಾರೆ. ಅವರು ಇದರ ಬಗ್ಗೆ ಒಂದು ರಿಟನ್ ಕಂಪ್ಲೈಂಟ್ ಸಹ ಕೊಟ್ಟಿದ್ದಾರೆ. ಐ ಜಿ ಪಿ. ಯವರಿಗೆ ಒಂದು ಕೊಟ್ಟಿದ್ದಾರೆ. ಕಮಿಷನರ್‌ರವರಿಗೆ ಒಂದು ಕೊಟ್ಟಿದ್ದಾರೆ ಮತ್ತು ನನಗೊಂದು ಸಹ ಕೊಟ್ಟಿದ್ದಾರೆ. ಇದರ ಬಗ್ಗೆ ಐ ಜಿ.ಪಿ. ಯವರು ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ ಅಂತ ನಾನು ಕೇಳಿದ್ದೇನೆ. ಈ ವಿಷಯದಲ್ಲಿ ನಿರಪರಾಧಿ ಹುಡುಗರನ್ನು ಸಿ.ಐ.ಡಿ. ಅಧಿಕಾರಿಗಳು ಯಾವ ಆಧಾರದ ಮೇಲೆ ಹಿಡಿದಿದ್ದಾರೆ ಅನ್ನುವುದನ್ನು ನಾನು ಕೇಳಬೇಕಾಗಿದೆ ಮತ್ತು ಇವರನ್ನು ಶಿಕ್ಷಿಸುವ ಬದಲು ಈ ಬೋರ್ಡ್ ಏನು ಇದೆ ಅಥವಾ ಇದರಲ್ಲಿ ಸದಸ್ಯರು ಏನು ಇದ್ದಾರೆ, ಇದನ್ನು ರದ್ದು ಮಾಡಿ. ಇದಕ್ಕೆ ಯೋಗ್ಯರಾಗಿರತಕ್ಕಂಥಾ ವ್ಯಕ್ತಿಗಳನ್ನು ಹಾಕಿದರೆ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸೂಚನೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಅಷ್ಟೇ ಅಲ್ಲದೆ ಈವೊತ್ತಿನ ದಿವಸ ಈ ಯೂನಿವರ್ಸಿಟಿಗೇನೇ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಪ್ರತ್ಯೇಕವಾಗಿ ಇದ್ದಾರೆ. ಹೀಗಿರುವಾಗ ಇವರ ಮೇಲೆ ನೈತಿಕ ಹೊಣೆ ಬಿದ್ದಿದೆ

ಎಂದು ನಾನು ತಿಳಿದುಕೊಂಡಿದ್ದೇನೆ. ಅವರೂ ಸಹ ನಿಜವಾಗಿಯೂ ನನ್ನ ಮೇಲೆ ಮಾಡಲ್ ರೆಸಾ್ಪನ್ಸಿಬಲಿಟಿ ಇದೆ ಅಂತ ಮನಗಂಡರೆ ನೀವು ಈ ದಿವಸವೇ ರಾಜೀನಾಮೆ ಕೊಡಬೇಕು. ಅವರು ಈ ರೀತಿ ಮಾಡಿದರೆ ಒಂದು ಸತ್‌ಸಂಪ್ರದಾಯ ಹಾಕಿ ಕೊಟ್ಟಂತಾಗುತ್ತದೆ. ನಾನು ಈ ರೀತಿ ತಿಳಿಸಿದನೆಂದು ತಾವು ಅನ್ಯಥಾ ಭಾವನೆ ಮಾಡಬಾರದು. ಏತಕ್ಕೆಂದರೆ ಇದರಿಂದ ಲಕ್ಷಾಂತರ ಮಕ್ಕಳ ಮೇಲೆ ಒಂದು ಆಘಾತವಾಗಿದೆ. ಅನೇಕ ಜನ ಮಕ್ಕಳು ಒಳ್ಳೆಯ ತರಪೇತಿಯನ್ನು ಹೊಂದಿ ಈ ಪರೀಕ್ಷೆಗೆ ಕೂತು ಕೊಂಡಿದ್ದಾರೆ. ಅಂಥಾ ಮಕ್ಕಳು ಪುನಃ ಪರೀಕ್ಷೆಗೆ ಹೋಗಿ ಬರೆಯಬೇಕು ಎಂದರೆ ಆ ಮಕ್ಕಳಿಗೆ ತುಂಬಾ ಜಿಗುಪ್ಸೆ ಆಗುವುದಲ್ಲದೆ ಮನಸ್ಸಿಗೆ ಸಾಕಷ್ಟು ಆಘಾತವೂ ಆಗುತ್ತದೆ. ಆದುದರಿಂದ ಈ ಹೊಣೆಗಾರಿಕೆಯನ್ನು ತಾವು ಹೊರಲೇಬೇಕು ಎಂದು ನಾನು ಸೂಚನೆ ಕೊಡುತ್ತೇನೆ. ತಾವು ದಯಮಾಡಿ ಈ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಬೇಕು. ಏತಕ್ಕೆಂದರೆ ದೇಶದಲ್ಲಿ ಹಿರಿಯರು ಈ ಬಗ್ಗೆ ಒಂದು ಸತ್‌ಸಂಪ್ರದಾಯವನ್ನು ಮಾಡಿ ಕೊಟ್ಟು ಹೋಗಿದ್ದಾರೆ. ನಿಮಗೆ ಒಂದು ಉದಾಹರಣೆ ಹೇಳಬೇಕಾದರೆ ಹಿಂದೆ ಇದ್ದಂಥಾ ದಿವಂಗತ. ಶಾರ್ ಬಹದ್ದೂರ್ ಶಾಸ್ತ್ರಿಯವರು ರೈಲ್ವೆ ಮಂತ್ರಿಗಳಾಗಿದ್ದಾಗ ಯಾವುದೋ ಒಂದು ರೈಲು ಆಕ್ಸಿಡೆಂಟ್ ಆದಾಗ ಇದಕ್ಕೆ ನಾನೇ ಹೊಣೆ ಎಂದು ಅವರು ರಾಜೀನಾಮೆ ಕೊಟ್ಟಿದ್ದು ತಮಗೆ ಗೊತ್ತಿದೆ. ಅವರೇನೂ ರೈಲು ನಡೆಸುವುದಕ್ಕೆ ಹೋಗಿರಲಿಲ್ಲ. ಆದರೆ ಅದಕ್ಕೆ ಸಂಬಂಧ ಪಟ್ಟ ಮಂತ್ರಿಗಳಾಗಿದ್ದುದರಿಂದ ಆ ಒಂದು ನೈತಿಕ ಹೊಣೆಯನ್ನು ನಾನು ಹೊರಲೇಬೇಕು ಎಂದು ಆ ರೀತಿ ಒಂದು ಸತ್‌ಸಂಪ್ರದಾಯವನ್ನು ಅವರು ಹಾಕಿಕೊಟ್ಟು ಹೋಗಿದ್ದಾರೆ. ಆದುದರಿಂದ ನೀವೂ ಸಹ ಹಾಗೆ ಒಂದು ಒಳ್ಳೆ ಸತ್‌ಸಂಪ್ರದಾಯವನ್ನು ಮಾಡಬೇಕು. ಮತ್ತು ಸಿ.ಒ.ಡಿ. ಅಧಿಕಾರಿಗಳು ಎಲ್ಲೆ ಮೀರಿ ಹೋಗುತ್ತಿದ್ದಾರೆ ಮತ್ತು ಈ ಮಂಡಲಿಯನ್ನು ರದ್ದು ಮಾಡುವುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಅನಾನಿಮಸ್ ಲೆಟರ್ ಬಂತು ಎಂದು ಉತ್ತರದಲ್ಲಿ ಹೇಳಿದರು. ಆ ಲೆಟರ್ ಮಂತ್ರಿಗಳಿಗೆ ಬಂತೊ ಅಥವಾ ಯಾರಿಗೆ ಬಂತು ಅನ್ನುವುದನ್ನು ಈಗ ತಿಳಿಸಬೇಕು. ನಾನು ಈ ಬಗ್ಗೆ ಹೇಳುವುದು ಏನೆಂದರೆ ಮಕ್ಕಳ ತಂದೆತಾಯಿಗಳು ಆರ್ಥಿಕವಾಗಿ ಒಂದೇ ಮಟ್ಟದಲ್ಲಿ ಇದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅನೇಕ ಬಡ ವಿದ್ಯಾರ್ಥಿಗಳೂ ಸಹ ಇದ್ದಾರೆ. ಚೆನ್ನಪಟ್ಟಣದಿಂದ ಬಂದು ಎಲ್ಲೋ ಒಂದು ಸಣ್ಣ ಕೊಠಡಿ ಮಾಡಿಕೊಂಡು 20-30 ರೂಪಾಯಿ ಬಾಡಿಗೆ ಕೊಟ್ಟು ತಾವೇ ಸ್ವತ: ಅಡಿಗೆ ಮಾಡಿಕೊಂಡು ಉಪ್ಪು ಮೆಣಸಿನಕಾಯಿ ಉಪಯೋಗಿಸಿಕೊಂಡು ಊಟ ಮಾಡಿ ಕೊಂಡು ಹೋಗುವಂಥಾ ಅನೇಕ ಮಕ್ಕಳು ಇದ್ದಾರೆ. ಯಾರೋ ಮಾಡಿದಂಥಾ ತಪ್ಪಿಗೆ ಎಲ್ಲರಿಗೂ ಒಂದೇ ತರಹ ಬರೆ ಹಾಕುವುದಕ್ಕೆ ಹೊರಟಿದ್ದಾರೆ. ಒಬ್ಬ ವಿದ್ಯಾರ್ಥಿ ಕಾಲೇಜು ವಿದ್ಯಾಭ್ಯಾಸ ಮಾಡುವುದಕ್ಕೆ ನಗರದಲ್ಲಿ ಇರಬೇಕಾದರೆ ಎಷ್ಟು ಕಷ್ಟ ಅನ್ನುವುದು ತಮಗೆ ಗೊತ್ತಿದೆ. ಅಂಥಾದ್ದರಲ್ಲಿ ಪುನ: ಅವರು ಪರೀಕ್ಷೆಗೆ ಕೂತುಕೊಳ್ಳಬೇಕು ಎಂದರೆ ನೀವೇ ಅವರ ಕಷ್ಟವನ್ನು ಊಹಿಸಬಹುದು. ಈಗ ಈ ರೀತಿ ಆಗಿರುವುದರಿಂದ ಆ ಮಕ್ಕಳ ಮೇಲೆ ಒಂದು ಭಾರಿ ಹೊರೆ ಆದಂತೆ ಆಗಿದೆ ಇದರಿಂದ ನಿರಪರಾಧಿ ಹುಡುಗರಿಗೆ ಒಂದು ನಿರಾಶೆ ಆಗಿರುವುದೂ ಅಲ್ಲದೆ ಅವರಿಗೆ ಮಾನಸಿಕ ಆಘಾತವೂ ಕೂಡ ಆಗಿದೆ. ಆದುದರಿಂದ ಆ ಮಕ್ಕಳ ತಂದೆತಾಯಿಗಳಿಗೆ ಆರ್ಥಿಕವಾಗಿ ಎಷ್ಟು ನಷ್ಟವಾಗುತ್ತದೆ ಅದನ್ನು ಸರ್ಕಾರದವರು ಭರ್ತಿ ಮಾಡಿ ಕೊಡುವುದು ಸರ್ಕಾರದ ಹೊಣೆ ಎಂದು ಹೇಳುತ್ತೇನೆ.

ಇನ್ನು ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಹೇಳಿದ ಹಾಗೆ ಈ ವಿಷಯ ತಿಳಿದ ತಕ್ಷಣ ತಾವು ರಾಜೀನಾಮೆ ಕೊಟ್ಟು ಈ ಬಗ್ಗೆ ಒಂದು ಸತ್‌ಸಂಪ್ರದಾಯವನ್ನು ಹಾಕಿಕೊಡಬೇಕಾಗಿತ್ತು. ಅಂಥಾ ಸಂಪ್ರದಾಯವನ್ನೆಲ್ಲಾ ನೀವು ಮರೆತುಬಿಟ್ಟಿದ್ದೀರಿ ಹೋಗಲಿ ಈಗಲಾದರೂ ಜ್ಞಾಪಕ ಮಾಡಿಕೊಳ್ಳಿ ಎಂದು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮುಂದಾದರೂ ಕೂಡ ಈ ಪರೀಕ್ಷೆ ಬಗ್ಗೆ ಈ ರೀತಿ ಮಾಡಿರಿ ಎಂದು ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಪ್ರಶ್ನೆ ಪತ್ರಿಕೆಗಳನ್ನು ರಾಜ್ಯಾದಂತ ಒಂದೇ ತರಹ ಮಾಡಿಸುವ ಬದಲು 5-6 ತರಹ ಮಾಡಿಸಿ. ಒಬ್ಬೊಬ್ಬ ಹುಡುಗನಿಗೆ ಒಂದೊಂದು

ತರಹ ಪ್ರಶ್ನೆ ಪತ್ರಿಕೆಯನ್ನು ಪ್ರಿಂಟ್ ಮಾಡಿಸಿಕೊಟ್ಟರೆ ಅವನು ಒಂದೇ ತರಹ ಉತ್ತರ ಬರೆಯುವುದಕ್ಕೆ ಕಷ್ಟವಾಗುತ್ತದೆ. ಏತಕ್ಕೆಂದರೆ ಒಬ್ಬೊಬ್ಬರ ಪ್ರಶ್ನೆ ಒಂದೊಂದು ತರಹ ಇರುತ್ತದೆ. ಆ ವಿದ್ಯಾರ್ಥಿಗಳು ಸರಿಯಾಗಿ ತಯಾರಾಗದೇ ಅದಕ್ಕೆ ಉತ್ತರ ಬರೆಯುವುದಕ್ಕಾಗುವುದಿಲ್ಲ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಈಗಿತ್ತಿನ ಇದರ ಬಗ್ಗೆ. ಆ ಹುಡುಗರಿಗೆ ಆಗಿರತಕ್ಕಂಥಾ ಒಂದು ಮಾನಸಿಕ ಆಘಾತ ಮತ್ತು ಅವರ ತಂದೆತಾಯಿಗಳಿಗೆ ಆಗಿರತಕ್ಕಂಥಾ ನಷ್ಟ ಏನು ಇದೆ ಅದನ್ನು ಸರ್ಕಾರದವರು ಭರ್ತಿ ಮಾಡಿಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ) —ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ವಿದ್ಯಾ ಸಚಿವರಲ್ಲಿ ಒಂದು ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಇದ್ದಿದ್ದರೆ ಇಂಥಾ ಅನರ್ಥಗಳು ಆಗುವುದಿಲ್ಲ. ಈಗ ಆಗಿರತಕ್ಕಂಥಾ ಅಚಾತುರ್ಯ ಮಾನಸೋ ಇಚ್ಛೆಯಾಗಿ ಪ್ರಣಾಮಿಸಿದೆ. ಇದನ್ನು ಲಘುವಾಗಿ ತೆಗೆದುಕೊಳ್ಳುವುದು ನೀತಿಯುತವಾದಂಥಾ ವ್ಯಕ್ತಿಗಳಿಗೆ ಸಲ್ಲದ ಮಾತು. ಈಗ ಆಡಳಿತ ಪಕ್ಷದವರ ಬಗ್ಗೆ ಆತ್ಮ ಸಲಹೆಯಾಗಿ ಒಪ್ಪಿಕೊಳ್ಳಬೇಕು. ಇದರಲ್ಲಿ ಅದಕ್ಷತೆ ನಡೆದಿದೆ. ಅಪ್ರಾಮಾಣಿಕತೆ ನಡೆದಿದೆ, ಇದರಿಂದಾಗಿ ಇಂತಹ ಅಚಾತುರ್ಯ ನಡೆದು ರಾಜ್ಯದ ಸಹಸ್ರಾರು ಮಕ್ಕಳ ಮೇಲೆ ಮತ್ತು ಅವರ ತಂದೆತಾಯಿಗಳ ಮೇಲೆ ಇದರ ಪರಿಣಾಮ ಉಂಟಾಗಿದೆ ಎನ್ನತಕ್ಕಂಥಾದ್ದನ್ನು ಅವರು ಆತ್ಮಸಾಕ್ಷಿಯಾಗಿ ಒಪ್ಪಿಕೊಳ್ಳಬೇಕು. ಇದಕ್ಕೆ ಬಹಿರಂಗವಾಗಿ ಅವರು ಹೊಣೆಗಾರರಾಗಲೇಬೇಕು. ಈ ಅಚಾತುರ್ಯಕ್ಕೆ ಯಾರು ಕಾರಣರು ಅನ್ನತಕ್ಕಂಥಾದ್ದನ್ನು ಆಡಳಿತ ಪಕ್ಷದವರು ಸ್ವಯಂಪ್ರೇರಿತರಾಗಿ ತಾವೇ ಇದರ ತಪ್ಪನ್ನು ಒಪ್ಪಿಕೊಳ್ಳುವುದು ನಾಗರೀಕ ಸಮಾಜದ ಲಕ್ಷಣ. ವಿರೋಧ ಪಕ್ಷದವರೂ ಸಹ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳಬೇಕು ಈಗ ಆಗಿರತಕ್ಕಂಥಾ ಅಚಾತುರ್ಯ ಅದಕ್ಷತೆ, ಅಪ್ರಾಮಾಣಿಕತೆ ಯಾವ ಅಧಿಕಾರಿ ಕಾರಣರಾಗಿದ್ದಾರೆ ಅನ್ನುವುದನ್ನು ಗುರುತಿಸಿದ್ದೀರಾ ? ಈ ಒಂದು ಇಲಾಖೆ ಸಹಸ್ರಾರು ಬಡವರ ಹಣವನ್ನು ಉಪಯೋಗಿಸಿ ಒಬ್ಬ ಮೇಲಾಧಿಕಾರಿಯನ್ನು ಇಡುತ್ತಾರೆ ಹಾಗೆ ನೇಮಿಸಿದಂಥಾ ಅಧಿಕಾರಿ ತನ್ನ ಆಡಳಿತದಲ್ಲಿ ಅದಕ್ಷತೆ ಅಪ್ರಾಮಾಣಿಕತೆಯಿಂದ ನಡೆದಿದ್ದರಿಂದ ಈ ರೀತಿ ಆಗಿದೆ ಅಂಥವರಿಗೆ ಏನು ಶಿಕ್ಷೆ ವಿಧಿಸುತ್ತೀರಿ ಅನ್ನುವುದನ್ನು ಮಾನ್ಯ ಸದಸ್ಯರು ಈ ಸಭೆಯಲ್ಲಿ ಬಹಿರಂಗಪಡಿಸಬೇಕು. ಈ ಇಲಾಖೆಯಲ್ಲಿ ಅದಕ್ಷತೆ, ಅಪ್ರಾಮಾಣಿಕತೆ ತಾಂಡವಾಡುತ್ತಿದೆ ಎಂದು ಮತ್ತೊಮ್ಮೆ ಹೇಳಿ ಈ ಜವಾಬ್ದಾರಿಯನ್ನು ಅವರ ಮೇಲೆ ಹೊರಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಯಾಹ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಪೊಲೀಸನೆಯದಾಗಿ ಪಿ. ಯು. ಸಿ. ಬೋರ್ಡ್ ಇನ್ನೂ ಚೆನ್ನಾಗಿ ನಡೆಯಬೇಕು ಮತ್ತು ಸಾಧ್ಯವಾದರೆ ಅದನ್ನು ರೀ-ಕನ್ಸ್‌ಟ್ರಕ್ಟ್ ಆದರೂ ಮಾಡಬೇಕೆಂದು ಹೇಳಿದ್ದಾರೆ. ಈಗ ಅದನ್ನು ಯಾವ ರೀತಿ ಉತ್ತಮಗೊಳಿಸಬೇಕೆಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಅದರಲ್ಲಿ ಕೆಲವು ದೋಷಗಳಿವೆ, ಅಲ್ಲಿಯ ಮೆಂಬರ್ಸ್‌ನ್ನು ಬದಲಾವಣೆ ಮಾಡಬೇಕು ಎಂಬುದಾಗಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅವನ್ನೆಲ್ಲಾ ಸರ್ಕಾರದವರು ಖಂಡಿತವಾಗಿಯೂ ಗಮನದಲ್ಲಿಟ್ಟುಕೊಂಡು, ಅದು ರೀ-ಕನ್ಸ್‌ಟ್ರಕ್ಷನ್ ಆಗಬೇಕಾದರೆ ಅದನ್ನು ಕೂಡ ಮಾಡುವುದಕ್ಕೆ ನಾವು ತಯಾರಿದ್ದೇವೆ. ಏಕೆಂದರೆ, ಈ ವಿದ್ಯೆಯಲ್ಲಿ ಮತ್ತು ಪರೀಕ್ಷೆಯಲ್ಲಿ ನಾವು ಒಂದು ಉತ್ತಮವಾದಂಥ ಸ್ಥಾನದಲ್ಲಿರಬೇಕು ಎಂಬುದನ್ನು ನಾನು ಬಯಸುವೆ. ಈ ದೃಷ್ಟಿಯಿಂದ ಇದು ರಿಫಾರವ್ ಆಗಬೇಕಾದರೆ ಅದನ್ನು ಸಹ ನಾವು ಮಾಡುತ್ತೇವೆ. ಪಿ. ಯು ಸಿ. ಬೋರ್ಡಿನ ಸದಸ್ಯರೊಬ್ಬರ ಮಗನು ಈ ಸಲದ ಪರೀಕ್ಷೆಗೆ ಕೂತಿದ್ದನೆಂದು ಮಾನ್ಯ ದೇವೇಗೌಡರು ಹೇಳಿದರು. ಆ ಸದಸ್ಯರ ಹೆಸರು ಅವರಿಗೆ ಗೊತ್ತಿರಬಹುದು. ಆದರೆ ಅವರ ಹೆಸರನ್ನ ಅವರು ಇಲ್ಲಿ ಹೇಳುವುದು ಬೇಡ ಅವರ ಹೆಸರನ್ನು ಸಿ. ಓ. ಡಿ. ಅವರಿಗೆ ಹೇಳಿದರೆ ಅವರು ಮುಂದಿನ ಕಾರ್ಯವನ್ನು ತೆಗೆದುಕೊಳ್ಳುವುದಕ್ಕೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಮುಖ್ಯವಾಗಿ ಇದಕ್ಕೆ ಎಲ್ಲರ ಸಹಕಾರವೂ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಈ ಪ್ರಕರಣದ ಬಗ್ಗೆ ಕೆಲವರ ಮೇಲೆ ಏನಾಕಾರಣ ಹೆರಾಸ್‌ಮೆಂಟ್ ಆಗಿದೆ ಎಂದು ಹೇಳಿದರು. ಆ ವಿಚಾರ ನನಗೆ ಈಗಲೇ ಗೊತ್ತಾಗಿದ್ದು. ಇನ್ನೋಸೆಂಟ್ ಪೀಪಲ್ಸ್ ಏನಾದ್ದಾರೆ, ಅವರ ಮೇಲೆ ಹೆರಾಸ್‌ಮೆಂಟ್ ಆಗಬಾರದು. ಈ ಬಗ್ಗೆ ತಾವು ನನಗೆ ಕಳುಹಿಸಿಕೊಟ್ಟಿರುವ ಕಾಗದವನ್ನು ಪೋಲೀಸಿನವರಿಗೆ ಕಳುಹಿಸಿಕೊಡುತ್ತೇನೆ.

ಇನ್ನು ಮಾನ್ಯ ಬೈರೇಗೌಡರು ಹೊಸಹೊಸ ವಿಚಾರಗಳನ್ನು ಹೇಳಿದರು. ಒಂದು ಸೆಟ್ ಪ್ರಶ್ನೆ ಪತ್ರಿಕೆಯನ್ನು ತಯಾರು ಮಾಡುವಾಗಲೇ ಇಷ್ಟೊಂದು ಕಷ್ಟವಾಗುತ್ತಿರುವಾಗ ಮಾನ್ಯ ಸದಸ್ಯರು ಹೇಳಿದಂತೆ ಒಂದೇ ಸಬ್ಜೆಕ್ಟ್‌ಗೆ ಹತ್ತಾರು ಪ್ರಶ್ನೆಪತ್ರಿಕೆಗಳನ್ನು ತಯಾರು ಮಾಡಿದರೆ, ಆದರಿಂದ ಮುಂದೆ ಏನಾಗುತ್ತದೆಂಬುದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಎಜುಕೇಷನ್ ಬಹಳಷ್ಟು ಡೆವಲಪ್‌ಮೆಂಟ್ ಆಗಿದೆ ಸಾವಿರಾರು ಟೀಚರ್ಸ್ ಇದ್ದಾರೆ. ಲಕ್ಷಾಂತರ ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ವಿದ್ಯಾರ್ಥಿಗಳ ಪೇರೆಂಟ್ಸ್‌ಸಹ ಸೇರುತ್ತಾರೆ. ಆದಕಾರಣ ಇದರಲ್ಲಿ ಎಲ್ಲರ ಜವಾಬ್ದಾರಿಯೂ ಇದೆ ಕಳೆದ ವರ್ಷ ದೆಹಲಿಯಲ್ಲಿಯೂ ಸಹ ಇದೇ ರೀತಿ ಆಗಿತ್ತು. ಈ ರೀತಿಯಾದರೆ ಬಹಳಷ್ಟು ತೊಂದರೆಗಳು ಬರುತ್ತವೆ. ನಮ್ಮ ರಾಜ್ಯದಲ್ಲಿ ಈ ವರ್ಷವೇ ಅಲ್ಲ, ಹತ್ತು ವರ್ಷಗಳ ಹಿಂದೆ, ಹದಿನೈದು ವರ್ಷಗಳ ಹಿಂದೆ ಸಹ ಆಗಿತ್ತು. ಕಳೆದ ವರ್ಷ ಸಹ ಸ್ವಲ್ಪ ಮಟ್ಟಿಗೆ ಆಗಿತ್ತು. ಈ ರೀತಿ ಕಳೆದ ಹತ್ತಾರು ವರ್ಷಗಳಿಂದ ಆಗಾಗ್ಗೆ ಸ್ವಲ್ಪ ಮಟ್ಟಿಗೆ ಆಗುತ್ತಿದ್ದರೂ ಸಹ ಅದನ್ನು ಸೀರಿಯಸ್ ಆಗಿ ತೆಗೆದುಕೊಂಡಿರಲಿಲ್ಲ. ಈ ಸಲವೇ ಇದನ್ನು ಸೀರಿಯಸ್ ಆಗಿ ತೆಗೆದುಕೊಂಡು, ಪರೀಕ್ಷೆಯನ್ನು ನಸ್ಪೆಂಡ್ ಮಾಡಿ ಹೊಸದಾಗಿ ಮಾಡುತ್ತಿರುವುದು. ಇದಕ್ಕೆ ಎಲ್ಲರ ಸಹಕಾರವೂ ಬೇಕು ಏಕೆಂದರೆ ಇದೇನೂ ಅಷ್ಟೊಂದು ಸುಲಭದ ವಿಚಾರವಲ್ಲ. ಮತ್ತು ಇದು ಒಬ್ಬರು ಇಬ್ಬರು ಅಥವಾ ಮೂವರಿಂದ ಆಗುವುದಿಲ್ಲ ಇದೊಂದು ಕಾಂಪ್ಲಿಕೇಟೆಡ್ ಸಬ್ಜೆಕ್ಟ್, ಎಕ್ಸಾಮಿನೇಷನ್ ಸಿಸ್ಟಮ್ ಎಂದಿಗೆ ಬಿದು ಕಾಂಪ್ಲಿಕೇಟೆಡ್ ಆಗಿದೆ. ಈ ಕಾರಣದಿಂದ ಈ ಪರೀಕ್ಷಾ ಪದ್ಧತಿಯನ್ನು ಡೀಸೆಂಟ್ರಲೈಜ್ ಮಾಡಬೇಕೆಂದು ಕೆಲವರು ಹೇಳಿದರು. ಇದೂ ಕೂಡ ಯೋಚನೆ ಮಾಡುವಂತಹ ವಿಚಾರವಾಗಿದೆ. ಕೆಲವು ಸಂದರ್ಭಗಳಲ್ಲಿ ಪೇಪರ್ ಕರಕ್ಷನ್ ಆಗುವ ಸಂದರ್ಭಗಳಲ್ಲಿ ಕರಪ್ಷನ್ ಆಗುವುದುಂಟು ನಾವು ಡೀಸೆಂಟ್ರಲೈಜ್ ಮಾಡಿದರೂ ಸಹ ಬೇರೆ ಬೇರೆ ಕಡೆ ಬೇರೆ ಬೇರೆ ಪೇಪರ್‌ಗಳನ್ನು ಕೊಡುವುದಕ್ಕೆ ಬರುದಿಲ್ಲ. ಹೈಕೋರ್ಟಿನ ತೀರ್ಮಾನದ ಪ್ರಕಾರ ಎಲ್ಲ ನಮ್ಮ ಜುರಿಸಡಿಕ್ಷನ್ ಇರುತ್ತದೆ, ಅಲ್ಲೆಲ್ಲಾ ಒಂದೇ ರೀತಿಯ ಸ್ಟಾಂಡರ್ಡ್ ಪ್ರಶ್ನೆ ಪತ್ರಿಕೆಯನ್ನು ಕೊಟ್ಟು ಜಡ್ಜ್ ಮಾಡಬೇಕೆಂದಿದೆ. ಮಾನ್ಯ ಪುಟ್ಟಸ್ವಾಮಯ್ಯನವರು ಪ್ರತಿಹಂತದಲ್ಲಿಯೂ ದಕ್ಷತೆ ಇರಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಅದೇ ರೀತಿ ಸಮಾಜದಲ್ಲಿ ಸಹ ದಕ್ಷತೆ ಹೆಚ್ಚಬೇಕು ಮುಖ್ಯವಾಗಿ National Character build up ಆಗಬೇಕು, ಆದರೆ ಜವಾಬ್ದಾರಿ ಸ್ಥಾನದಲ್ಲಿರುವವರು ಹೆಚ್ಚು ದಕ್ಷರಾಗಿರಬೇಕೆಂಬುದನ್ನು ನಾನು ಒಪ್ಪುತ್ತೇನೆ ಮತ್ತು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡಬೇಕೆಂಬುದನ್ನು ಸಹ ನಾನು ಖಂಡಿತವಾಗಿ ಒಪ್ಪುತ್ತೇನೆ. ಈ ಒಂದು ಕಾರಣದಿಂದಲೇ ನಾನು ಕಟ್ಟು ಹೆಚ್ಚು ಇಟ್ಟಿರುವುದು. Very promptly and probably very boldly we have taken steps. I think you will all congratulate me for such a step which had never been taken in the past. Instead of asking for my resignation, you should have congratulated me for the very bold step and very prompt action taken. I am sure you will appreciate the stand taken by me.

Budget Estimates for 1977-78

General Discussion (Debate Continued)

† ಶ್ರೀ ಎ. ಎನ್. ಪಾಟೀಲ್ (ಹುಮ್ನಾಬಾದ್).—ಅಧ್ಯಕ್ಷರೇ, ಮಾನ್ಯ ಆರ್ಥ ಸಚಿವರು ಮಂಡಿಸಿರತಕ್ಕಂಥ ಡಿಮ್ಯಾಂಡ್‌ಗಳನ್ನು ವಿರೋಧ ಮಾಡುತ್ತಾ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಇದುವರೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನನ್ನ ಮಿತ್ರರಾದಂಥ ವೀರಣ್ಣಳಿಸಂದ್ರಶೇಖರ್ ಅವರು ಕೆಲವು ವಿಷಯಗಳ ಬಗ್ಗೆ ಮಾತನಾಡಿದರು. ಹಿಂದೆ ಆದಂಥ